







ಕ್ಯಾಮೆರಾ ರೆಡಿ ಮಾಡಿಕೊಳ್ಳುವ ಮೊದಲು ಆ ಹಕ್ಕಿ ಎಲ್ಲಿ ಹೆಚ್ಚಾಗಿ ಓಡಾಡುತ್ತಿತ್ತು ಎನ್ನುವುದನ್ನು ತಿಳಿದು ಆ ಹಕ್ಕಿಯ ಓಡಾಟಕ್ಕೆ ಅಡಚಣೆಯಾಗದಂತೆ ದಟ್ಟವಾಗಿ ಬೆಳೆದ ದಾಸವಾಳ ಗಿಡದ ಮರೆಯಲ್ಲಿ ಕಡುಹಸಿರೆಲೆಯ ಬಣ್ಣದ ಕ್ಯಾಮೊಫ್ಲೇಜ್ ಹೈಡ್ ಜೋಡಿಸಿಕೊಂಡು ಗೆಳೆಯನೊಂದಿಗೆ ಕುಳಿತುಬಿಟ್ಟೆ.

ಒಂದು ಗಂಟೆ ಕಳೆಯಿತು. ಹಕ್ಕಿ ಪ್ರತ್ಯಕ್ಷವಾಗಲಿಲ್ಲ. ಮಧ್ಯಾಹ್ನವಾಗಿತ್ತು. ಮುಂಜಾನೆ ತಿಂದಿದ್ದ ಟಿಫನ್ ಕರಗಿ ಹೋಗಿತ್ತು. ಹಾಗಾಗಿ ಗೆಳೆಯ, 'ಎದ್ದೇಳಿ ಊಟ ಮಾಡಿ ಬರೋಣ' ಎಂದರು.

ಅಷ್ಟರಲ್ಲಿ ಧುತ್ತನೆ ಆ ಹಕ್ಕಿ ಪ್ರತ್ಯಕ್ಷವಾಗಿತ್ತು. ಪುಟ್ಟ ಕಲ್ಲಿನ ಮೇಲೆ ಎಗರಿ ಕುಳಿತ ಆ ಹಕ್ಕಿ ಒಮ್ಮೆ ತನ್ನ ಮೈಯನ್ನು ಜಾಡಿಸಿತು. ಆಗ ಅದರ ಮೈಗೆ ಅಂಟಿಕೊಂಡಿದ್ದ ಮಳೆ ಹನಿಗಳು ಮುತ್ತುಗಳು ಚದುರಿದಂತೆ ಚದುರಿದವು. ತನ್ನ ಕಾಲುಗಳಿಂದ ಮೈಯನ್ನೊಮ್ಮೆ ಕೆದರಿಕೊಂಡು, 'ಚಿಕ್ಕ್..... ಚಿಕ್ಕ್..' ಎಂದು ಸಣ್ಣಗೆ ಕೂಗಿತು. ಮರಿಹಕ್ಕಿ ಕುಪ್ಪಳಿಸುತ್ತ ಬಂತು. ತಾಯಿ ಹಕ್ಕಿ ನೆಲವನ್ನು ಕುಕ್ಕಿ ಕುಕ್ಕಿ ಮಣ್ಣನ್ನು ಅಗೆಯತೊಡಗಿತು. ಅದರ ಕೊಕ್ಕಿಗೆ ಎರೆಹುಳುಗಳು ಸಿಗತೊಡಗಿದವು. ಅವುಗಳನ್ನು ಮರಿ ಹಕ್ಕಿಗೆ ತಿನ್ನಿಸತೊಡಗಿತು. ಹಾಗೆಯೇ ಮರಿಹಕ್ಕಿಗೆ ನೆಲವನ್ನು ಸೀಳಿ ಹುಳುಗಳನ್ನು ಹುಡುಕುವ ತಂತ್ರವನ್ನು ಹೇಳಿಕೊಡತೊಡಗಿತು.

ಈ ಹಕ್ಕಿಯನ್ನು ವೈಟ್ ಥ್ರೋಟೆಡ್ ಥ್ರಶ್ ಎಂದೂ ಕರೆಯುತ್ತಾರೆ. ಕನ್ನಡದಲ್ಲಿ ಈ ಹಕ್ಕಿಗೆ 'ನೆಲಸಿಳ್ಳಾರ' ಎಂದು ಹೆಸರು. ನೆಲವನ್ನು ಕುಕ್ಕಿ ಅಥವಾ ಸಿಳಿ ಆಹಾರವನ್ನು ಹುಡುಕಿಕೊಂಡು ತಿಂದು ಜೀವಿಸುವ ಗುಣಕ್ಕೆ ಆ ಹೆಸರು ಬಂದಿದೆ. ಬಹಳ ನಾಚಿಕೆ ಸ್ವಭಾವ. ತೇವಾಂಶವುಳ್ಳ ದಟ್ಟ ಕಾಡಿನ ಪರಿಸರದಲ್ಲಿಯೇ ಹೆಚ್ಚಾಗಿರುತ್ತದೆ. ಸಾಮಾನ್ಯವಾಗಿ ಗಂಡು ಹೆಣ್ಣು ಎರಡು ಹಕ್ಕಿಗಳು ಜೊತೆಯಾಗಿಯೇ ಇರುತ್ತವೆ. ಬೇಸಿಗೆ ಕಳೆದು ಮಳೆಗಾಲ ಸುರುವಿಟ್ಟುಕೊಳ್ಳುತ್ತಿದ್ದಂತೆ ಎರಡೂ ಹಕ್ಕಿಗಳು ಒಟ್ಟಾಗಿ ಗೂಡು ನಿರ್ಮಿಸಿ ಮೊಟ್ಟೆ ಇಟ್ಟು ಮರಿ ಮಾಡುತ್ತವೆ. ಎಂಟತ್ತು ಅಡಿಗಳಷ್ಟು ಎತ್ತರದಲ್ಲಿ ಮೆತ್ತಗಿನ ಕಡ್ಡಿಗಳನ್ನು, ಎಲೆಗಳನ್ನು, ಪಾಚಿಯಂತಹ ಸಸ್ಯಗಳನ್ನು ಸಂಗ್ರಹಿಸಿ ಗೂಡನ್ನು ನಿರ್ಮಿಸುತ್ತವೆ.

ಸಾಮಾನ್ಯವಾಗಿ ಎರಡು ಮೊಟ್ಟೆ, ಹೆಚ್ಚೆಂದರೆ ನಾಲ್ಕು ಮೊಟ್ಟೆಗಳನ್ನು ಇಡುತ್ತವೆ. ಮೊಟ್ಟೆಗಳು ತಿಳಿ ನೀಲಿ ಹಾಗೂ ಸ್ವಲ್ಪ ಹಸಿರು ಬಣ್ಣ. ಹೆಣ್ಣು ಹಕ್ಕಿ ಆಹಾರವನ್ನು ಅರಸಿಕೊಂಡು ಹೋದಾಗ ಮಾತ್ರ ಗಂಡು ಹಕ್ಕಿ ಮೊಟ್ಟೆಗಳ ಮೇಲೆ ಕೂತು ಕಾವು ಕೊಡುತ್ತದೆ. ಹೆಣ್ಣು ಹಕ್ಕಿ ಕಾವು ಕೊಡುವಾಗಲೂ ಗಂಡು ಹಕ್ಕಿ ಗೂಡಿನ ಆಸುಪಾಸಿನಲ್ಲಿಯೇ ಆಹಾರ ಅರಸಿಕೊಂಡು ರಕ್ಷಣಾತ್ಮಕವಾಗಿ ಓಡಾಡಿಕೊಂಡಿರುತ್ತದೆ.

ಮೊಟ್ಟೆಯಿಂದ ಹೊರಬಂದ ಮರಿಗಳಿಗೆ 14–15 ದಿನಗಳಾಗುತ್ತಿದ್ದಂತೆ ರೆಕ್ಕೆಗಳಲ್ಲಿ ಗರಿಗಳು ಮೂಡುತ್ತವೆ. ಹಿಂಬದಿಗೆ ಪುಕ್ಕವು ಬಲವಾಗಿ, ಗೂಡಿನಿಂದ ಹೊರಕ್ಕೆ ಬರುತ್ತವೆ. ತಂದೆ ತಾಯಿಯ ಹಿಂದೆಯೇ ಕುಪ್ಪಳಿಸುತ್ತ ಕುಪ್ಪಳಿಸುತ್ತ ಓಡಾಡಿಕೊಂಡಿರುತ್ತವೆ. ಹೆಚ್ಚಾಗಿ ಸದ್ದು ಮಾಡದೆ ಸಂಚರಿಸುವ ಈ ಹಕ್ಕಿಗಳು ಇತರೆ ಹಕ್ಕಿಗಳಂತೆ ಮನಸ್ಸಿಗೆ ಬಂದಂತೆ ಕೂಗುವುದಿಲ್ಲ. ಅದರಲ್ಲೂ ಸಂತಾನೋತ್ಪತ್ತಿಯ ಸಮಯದಲ್ಲಿಯಂತೂ ಕೂಗುವುದು ಕಡಿಮೆ.

ನೆಲಸಿಳ್ಳಾರ ಹಕ್ಕಿಗಳು ತಮ್ಮ ಮರಿಗಳಿಗೆ ಆರಂಭದಲ್ಲಿ ಜೇಡರ ಹುಳುಗಳನ್ನು ಹೆಚ್ಚಾಗಿ ತಂದು ತಿನಿಸುತ್ತವೆ. ದಿನಗಳೆದಂತೆ ಎರೆಹುಳು, ಮಿಡತೆ ಹಾಗೂ ಗೆದ್ದಲು ಹುಳುಗಳನ್ನು ಉಣಿಸುತ್ತವೆ. ಸಂಜೆಯ ವೇಳೆ ಚುರುಕಾಗಿ ಓಡಾಡಿಕೊಂಡಿರುವ ಈ ಹಕ್ಕಿಗಳು ಕತ್ತಲು ಆವರಿಸಿಕೊಳ್ಳುವ ತನಕವೂ ಆಹಾರ ಹುಡುಕುತ್ತವೆ. ಮರಿಹಕ್ಕಿಗಳನ್ನು ಬೇಟೆಯಾಡಿ ತಿನ್ನುವ ವೈರಿ ಹಕ್ಕಿಗಳಾದ ಕೆಂಬೂತ, ಸೀಕ್ರಾ, ಗಿಡುಗಗಳಿಂದ ರಕ್ಷಿಸಲು ಗಂಡು ಹಕ್ಕಿ ಹಗಲು ರಾತ್ರಿ ಶ್ರಮಿಸುತ್ತದೆ.

ನಮ್ಮ ರಾಜ್ಯಕ್ಕೆ ಮಳೆಗಾಲಕ್ಕಷ್ಟೇ ವಲಸೆ ಬರುವ ಈ ನೆಲಸಿಳ್ಳಾರ ಹಕ್ಕಿಗಳು ಉತ್ತರ ಭಾರತದ ಹಿಮಾಲಯದ ಪ್ರದೇಶದಲ್ಲಿ ಹೆಚ್ಚಾಗಿ ವಾಸಿಸುತ್ತವೆ. ನೆರೆ ದೇಶಗಳಾದ ಬಾಂಗ್ಲಾ, ಶ್ರೀಲಂಕಾ, ಥಾಯ್ಲ್ಯಾಂಡ್, ಮಲೇಷ್ಯಾ, ನೇಪಾಳ, ಭೂತಾನ್‌ಗಳಲ್ಲೂ ಇವೆ. ಗಂಟೆ ಐದಾಗುತ್ತಲೇ ಕತ್ತಲಾಗಿ ನೆಲಸಿಳ್ಳಾರ ಹಕ್ಕಿಗಳು ಮರಿಗಳೊಂದಿಗೆ ಮರೆಯಾದವು. ಹೈಡ್‌ನಿಂದ ಹೊರಬಂದು ಮಬ್ಬುಗತ್ತಲಿನಲ್ಲಿ ಅತ್ತಿತ್ತ ಕಣ್ಣಾಡಿಸಿ ಮನೆಯನ್ನು ಸೇರಿಕೊಂಡೆವು.